ಮೈಸೂರ ಗೆಜೆಟ್ಟ

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಮಾರ್ಚ್ ತಾ|| 28, ಸ್ಕ 1885.

ಟಿಪ್ಪಣಿ ಈ ಭಾಗವನ್ನು ವ್ಯತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಿನ್ಯಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನ್‌ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಷ್ಫೇಸ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿವಾಂಡ್ ಡ್ರಾಫ್‌ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಷ್ಫೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಮೈಸೂರು ರೈಲ್‌ವೆ ಡಿಬೆಂಚರು ಬಾನೆ ಪತ್ರಗಳಿಗೆ ಬಡ್ಡೀ ಪಾವತಿ ಮಾ[illegible]ವು.

ಟ್ರೈಜರಿ ಇಲಾಖಾ ಡೆಪ್ಯುಟಿ ಕಮ್ಮಿಷನರ್‌ಗಳಿಗೆ—ಸರಕೀಲರ್ ನಂಬರ್ 1625, ತಾ[illegible]

ಕೇಕಡಾ 5ರ ಬಾಬತು ಮೈಸೂರು ರೈಲ್‌ವೆ ಡಿಬೆಂಚರ್‌ಗಳಿಗೆ ಬಡ್ಡಿಯು ಈ ಆಫೀಸಿನ ವಿಶೇಷ [illegible] ಸದರೀ ಡಿಬೆಂಚರುಗಳು ಹಾಜರ್ಮಾಡಲ್ಪಡುವ ಯಾವ ವಿಜಾನೆಯಲ್ಲಿಯಾದರು ಯಿದುವರಿಗೆ ಪಾವತೀ [illegible] ಖಯಿಂದ ಹಿಂದಿನ ಆಖೈರ್ ವಾಯಿದೆ ಬಡ್ಡಿ ವೊಬಲಗು ಮತ್ತೊಂದು ವಿಜಾನೇಯಲ್ಲಿ ಪಾವತಿ ಮಾಡಲ್ಪಟ್ಟರು ವಿಜಾನೇಯಲ್ಲಿ ಬಡ್ಡಿ ಪಾವತಿ ಮಾಡಲ್ಪಡಬೇಕೋ ಅಂಥಾ ತಾಲ್ಲೂಕು ಯಾ ಡಿಸ್ಟ್ರಿಕ್ಟಿನ ಟ್ರೈಜರಿ ಆಫೀಸರರವಾಗ[illegible] ವರ್ಗದ ಬಗ್ಗೆ ಡಿಬೆಂಚರಿನ ಸ್ವಂತಗಾರನಿಂದ ವಂದು ಅರ್ಜಿ ತೆಗದುಕೊಂಡು ಅದರೊಡನೆ ಡಿಬೆಂಚರಿನ ಮೇಲಿನ ಅರ್ಥಾ[illegible] ಕಾಂಪ[illegible] ಟ್ರೋಲರವರಿಗೆ ಮುಂಚಿತವಾಗಿ ಕಳುಹಿಸತಕ್ಕದ್ದು.

ಕಾಂಪ್ಟೊಲರ್ ಯವರು ಅದರಮೇಲೆ ಆರಡರ್ ಮಾಡಿ ಟ್ರೆಜರಿ ಆಫೀಸರಿಗೆ ಡಿಬೆಂಚರಿನ ಅರ್ಧ ಭಾಗವನ್ನು ವಾಪಸ್ ಮಾಡುವ ಬಲ್ಲದೆ ಹಿಂದಿನ ಕಡೆ ವಾಯಿದೆ ಬಡ್ಡಿ ಪಾವತೀ ಮಾಡಲ್ಪಟ್ಟ ಟ್ರೆಜರಿಗೂ ವರ್ತಮಾನ ತಿಳಿಸುವರು.

ಪ್ರತಿ ತಾಲ್ಲೂಕು ನ ಡಿಸ್ಟ್ರಿಕ್ಟು ಟ್ರೆಜರಿ ಆಫೀಸರ್‌ಗಳೂ, 1885ನೇ ಇಸವಿ ಫಿಬ್ರವರೀ 14ಕ್ಕೆ ಆಖೈರಾದ ಛಷ್ ಮಾಹೆಗೆ ಬಡ್ಡೀ ಪಾವತೀ ಮಾಡಲ್ಪಟ್ಟ ಮೈಸೂರು ಡಿಬೆಂಚರ್‌ಗಳ ವಂದು ರಿಜಸ್ಟರನ್ನು ಹೊಸದಾಗಿ ಯಿಡತಕ್ಕದ್ದು. ಬಡ್ಡೀ ಪಾವತೀ ಆದ ಹಾಗೆಲ್ಲಾ ಪ್ರತಿ ಡಿಬೆಂಚರು ದಾಖಲ್ಮಾಡಲ್ಪಟ್ಟು ತಮ್ಮ ಟ್ರೆಜರಿಯಿಂದ ಯಾ ತಮ್ಮ ಟ್ರೆಜರಿಗೆ ವರ್ಗ ಮಾಡಲ್ಪಟ್ಟ ಬದಲಾವಣೆಗಳು ಯಿದರಿಂದ ಕಂಡಂತೆ ನಮೂದಿಸಲ್ಪಡತಕ್ಕದ್ದು.

ಡಿಬೆಂಚರಿನ ನಂಬರ್.	ಮೊಬಲಗು.	ಯಾವ ಛಷ್‌ಮಾಹೆಗೆ ಬಡ್ಡೀ ಪಾವತೀ ಮಾಡಲ್ಪಟ್ಟಿತು.	ಬಡ್ಡಿಯ ಮೊಬಲಗು.	ಪಾವತೀ ತಾರೀಖು.	ಯಾರಿಗೆ ಪಾವತೀ ಮಾಡಲ್ಪಟ್ಟಿತು.	ವರ್ಗಾ ವರ್ಗಿ ಮುಂತಾದ ಷರಾಗಳು.

ಪ್ರತಿ ವಂದು ಖತಾಯಿತಿ ಕೆಳಗೂ ಸುಮಾರು ಹತ್ತು ಛಷ್ ಮಾಹೆಗಳ ಬಡ್ಡೀ ಪಾವತಿ ಬರೆಯುವಬಗ್ಗೆ ಖಾಲೀಜಾಗಾ ಬಿಡಲ್ಪಡಬೇಕು.

ಹೆಚ್. ಹಡಿರ್ಸ್,
ಕಾಂಪ್ಟೊಲರ್.

ಬೆಂಗಳೂರು ಷಹರ್ ಮ್ಯುನಿಸಿಪ್ಯಾಲಿಟಿ.

ಸರಟಿಫಿಕೇಟ್.

ತಾರೀಖು 10ನೇ ಮಾರ್ಚೀ 1885.

ನಂ. 608.

ಇದರಿಂದ ಸರಟಿಫೈ ಮಾಡುವದೇನಂದರೆ, ವೀತಾರಾಮಯ್ಯನ ಕೊಳದ ಸಮೀಪದಲ್ಲಿಯೂ ಮೈಸೂರು ಸ್ಟೇಟ್ ರೈಲ್ವೆ ಇಲಾಖಾ ಸ್ಟಾಫ್‌ಕ್ವಾರಟರಿನ ಬಾಜೂದಲ್ಲಿಯೂ ಇರುವ ಹಾಲಿ ಸ್ಮಶಾನಘಟ್ಟನು ಈಗಿನಂತೆಯೆ ಉಳಿಸಲ್ಪಟ್ಟರೆ ಅದರ ಬಾಜೂಬಾಜೂದಲ್ಲಿನ ನಿವಾಸ ಸ್ಥರ ಆರೋಗ್ಯಕ್ಕೆ ಅಪಾಯವನ್ನುಂಟು ಮಾಡತಕ್ಕಂಥಾ ಸ್ಥಿತಿಯಲ್ಲಿರುವದರಿಂದ ಹಾಲಿ ಇರತಕ್ಕ ಸ್ಮಶಾನಘಟ್ಟದಿಂದ ಆಚೆಗೆ ಸ್ವಲ್ಪದೂರ ದಲ್ಲಿಯೇ ಮುರದೆಗಳ ದರ್ಫ ಮತ್ತು ಸುಡುವ ಬಗ್ಗೆ ಈಗಿರುವದಕ್ಕೆ ಬದಲಾಗಿ ಬೇರೆ ಸ್ಮಶಾನಘಟ್ಟವು ನಿಯಮಿಸಲ್ಪಟ್ಟಿರುತ್ತೆ. ಇದೆ ಂದ ಧೃಢೀಕರಿಸುವದೇನಂದರೆ, ಈ ಸರ್ಟಿಫಿಕೇಟ್ ತಾರೀಖು ಮೊದಲು ಯಿರಪತ್ತಿಂಗಳು ಕಳೆದ ತರುವಾಯ ಯಾವ ಮನುಷ್ಯನೇ ಆಗಲೀ ಸದರ ವೀತಾರಾಮಯ್ಯನ ಕೊಳದ ಸಮೀಪದಲ್ಲಿಯೂ ರೈಲ್ವೇ ಸ್ಟಾಫ್‌ಕ್ವಾರಟರಿನ ಬಾಜೂದಲ್ಲಿಯೂ ಯಿರತಕ್ಕ ಮೇಲೆ ಕಂಡ ಸ್ಮಶಾನ ಯಾವ ಹೆಣವನ್ನಾದರು ಸುಟ್ಟಾಗ್ಯೂ ಹೂಳಿದಾಗ್ಯೂ ಅಂಥಾ ಪ್ರತೀ ಮನುಷ್ಯನೂ 1871ನೇ ಇಸವಿ ಬೆಂಗಳೂರು ಮ್ಯುನಿಸಿ ಪಲ್ ಶೇಷನಿನ 19 ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ದಂಡಗಳಿಗೆ ಗುರಿಯಾಗತಕ್ಕದ್ದು.

ಯೆ. ವೀನಿವಾಸಾಚಾರ್,
ವೈಸ್ ಪ್ರೆಸಿಡೆಂಟ್, ಷಹರ್ ಮ್ಯುನಿಸಿಪಲ್ ಕಮ್ಮಿಷ್ನರ್.

ಬೆಂಗಳೂರು ಡಿಸ್ಟ್ರಿಕ್ಟು.

ಕೋರ್ಟು ನಾಜರ್ ಸುಬ್ಬಣ್ಣನ ಬಾಬತು ಈ ಕೆಳಗೆ ಕಂಡ ಮಾಲುಗಳು ಯಿಟ್ಟು ಯಿದ್ದ ರೈಲ್ ಬೀ ಟೆಯಲ್ಲಿ, ಸ್ರ 1885ನೇ ಇಸವಿ ಮಾರ್ಚೀ 8ನೇ ತಾರೀಖು ಬೆಳಗ್ಯೆ 7½ ಘಂಟೆ ಸಮಯದಲ್ಲಿ ಅವರ ಸಾ ದ ಕಳವಾಗಿರುತ್ತೆ. ಸದರೀ ಮಾಲುಗಳನ್ನು ಪತ್ತೇ ಮಾಡಿಕೊಟ್ಟವರಿಗೆ ಮೇಲ್ಕಂಡ ಸುಬ್ಬಣ್ಣನವರು 100 ರೂಪಾ